## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 3 ವಾರಗಳ ಕನಿಷ್ಠ ಮಟ್ಟಕ್ಕಿಳಿದೆ

ಪ್ರಬಲ ರಿಂಗಿಟ್ಸ್ ವಿನಿಮಯ ದರ, ಪ್ರತಿಸ್ಪರ್ಧಿ ಪರ್ಯಾಯ ಖಾದ್ಯ ತೈಲ ದರ ಇಳಿಕೆಯ ಪ್ರಕ್ರಿಯೆಗಳಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 1.53 ಶೇಕಡಾ ಇಳಿಕೆಯೊಂದಿಗೆ (600 ರಿಂಗಿಟ್ಸ್ ಇಳಿಕೆ) ಟನ್‌ಗೆ 3860 ರಿಂಗಿಟ್ಸ್ ($ 861.41) ಆಗಿದೆ. ಕಪ್ಪುಸಮುದ್ರ ಪ್ರದೇಶಗಳ ಸೂರ್ಯಕಾಂತಿ ಎಣ್ಣೆ ದರ ಇಳಿಕೆ, ಮತ್ತಿತರ ಖಾದ್ಯ ತೈಲ ದರ ಇಳಿಕೆ ಪಾಮೆಣ್ಣೆಯ ದರ ಇಳಿಕೆಯಲ್ಲಿ ಪ್ರಭಾವ ಬೀರಿದೆಯೆನ್ನಲಾಗಿದೆ.

## ಅಧಿಕ ಬೇಡಿಕೆ ಜೀರಿಗೆ ದರ ಮತ್ತಷ್ಟು ಹೆಚ್ಚಳ ಸಾಧ್ಯತೆ

ಇತ್ತೀಚಿನ ಅಕಾಲಿಕ ಮಳೆಯಿಂದ ಕಟಾವಿಗೆ ಬಂದಿದ್ದು ಕಟಾವಾಗದೆ ಉಳಿದಿದ್ದ ಅಂಶಿಕ ಜೀರಿಗೆ ಬೆಳೆಯು ಹಾನಿಯಾಗುವ ಅಥವಾ ಗುಣಮಟ್ಟ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಜಾಗತಿಕವಾಗಿ ಈ ವರ್ಷ ಭಾರತವೇ ಜೀರಿಗೆಯ ಪೂರೈಕೆದಾರವಾಗಿರುವುದರಿಂದ ರಫ್ತು ಬೇಡಿಕೆ ಹಾಗೂ ದೇಶೀ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆ. ಇತರ ಜಾಗತಿಕ ಪೂರೈಕೆ ರಾಷ್ಟ್ರಗಳಾದ ಸಿರಿಯಾ ಹಾಗೂ ಟರ್ಕಿಗಳಿಂದ ಕೆಲವು ಕಾರಣಗಳಿಂದ ಜೀರಿಗೆ ಪೂರೈಕೆಯಾಗುತ್ತಿಲ್ಲದೆನ್ನಲಾಗಿದೆ. 85 ಲಕ್ಷ ಚೀಲಗಳಿರಬಹುದೆನ್ನಲಾಗಿದೆ. (ತಲಾ 55 KG ಚೀಲ) ಇದರಿಂದ ಬೇಡಿಕೆ ಹಾಗೂ ಪೂರೈಕೆಯಲ್ಲಿ ಆಗಾಧ ವ್ಯತ್ಯಾಸಗಲಾಗುವ ಸಾಧ್ಯತೆಯಿದ್ದು ದರ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಈ ವರ್ಷ ದೇಶೀ ಬೆಳೆ ಅಧಿಕವಿದ್ದರೂ, ಪ್ರತಿಕೂಲ ಹವಾಮಾನಗಳಿಂದ ಬೆಳೆಹಾನಿ, ಗುಣಮಟ್ಟದಲ್ಲಿ ವ್ಯತ್ಯಾವಾಗುಬಹುದೆನ್ನಲಾಗಿದೆ.